


‘ಎಬಿಸಿ’ ಕಿರುಚಿತ್ರದಲ್ಲಿ ಶೃತಿ ಹರಿಹರನ್

ಶಾಲೆಗಳು ಮತ್ತು ಅಲ್ಲಿನ ವಿದ್ಯಾರ್ಥಿಗಳ ಸ್ಥಿತಿಗತಿಯ ಬಗ್ಗೆ ಬೆಳಕು ಚೆಲ್ಲುವ ಕಥನ ಹೊಂದಿದೆ. ಕನ್ನಡ ಶಾಲೆಯೊಂದನ್ನು ಉಳಿಸಲು ಶಿಕ್ಷಕನೊಬ್ಬ ಪಡುವ ಪ್ರಯತ್ನದ ಕಥೆ ನೋಡುಗರ ಭಾವನೆಗಳನ್ನು ಕಲಕಿತ್ತು. ವರ್ಷದಿಂದ ವರ್ಷಕ್ಕೆ ಕನ್ನಡ ಶಾಲೆಗಳು ಮುಚ್ಚುತ್ತಿರುವ ಸಂದರ್ಭದಲ್ಲಿ ಈ ಕಿರುಚಿತ್ರ ವರ್ತಮಾನದ ದಾರುಣ ಸಂಗತಿಯೊಂದಕ್ಕೆ ಕನ್ನಡಿ ಹಿಡಿಯುವ ಪ್ರಯತ್ನ ನಡೆಸಿತ್ತು. ‘ಮರೀಚಿ’ ಆಕರ್ಷ ನಿರ್ದೇಶನದ ಮತ್ತೊಂದು ಕಿರುಚಿತ್ರ. ಪ್ರಸ್ತುತ ಅವರು ಕೇಶವ ಮಳಗಿಯವರ ಸಣ್ಣಕಥೆಯೊಂದನ್ನು ಕಿರುಚಿತ್ರಕ್ಕೆ ಅಳವಡಿಸುವ ಪ್ರಯತ್ನದಲ್ಲಿದ್ದಾರೆ.

ಜೀವನ್ ಗಂಗಾಧರಯ್ಯ ನಿರ್ದೇಶನದ ‘ ಪು.ತಿ.ನೋ.’ ಚಿತ್ರದಲ್ಲಿ ಮಾತುಗಳೇ ಇಲ್ಲ. ದೆಹಲಿಯಲ್ಲಿ ನಡೆದ ನಿರ್ಭಯಾ ಪ್ರಕರಣವನ್ನು ನೆನಪಿಸುವ ಈ ಕಿರುಚಿತ್ರಕ್ಕೆ ಮಾತುಗಳು ಭಾರವೆಂದು ನಿರ್ದೇಶಕರಿಗೆ ತೋರಿರುವುದು ಸಹಜವಾಗಿಯೇ ಇದೆ. ಲೈಂಗಿಕ ದೌರ್ಜನ್ಯದ ವಿರುದ್ಧ ದನಿಯೆತ್ತುವ ಮತ್ತೊಂದು ಕಿರುಚಿತ್ರ ‘ನ್ಯಾಯ’. ಜಯಲಕ್ಷ್ಮೀ ಪಾಟೀಲ್ ನಿರ್ದೇಶನದ ಈ ಚಿತ್ರದಲ್ಲಿ, ಅತ್ಯಾಚಾರದಿಂದ ಹೆಣ್ಣುಮಕ್ಕಳ ಬದುಕು ಹಾಳಾಗಬಾರದು ಎಂಬ ಕಳಕಳಿ ಇದೆ.

ಸಂಜ್ಯೋತಿ ನಿರ್ದೇಶನದ ‘ಅನಲ’ ಕಿರುಚಿತ್ರ ಹೆಣ್ಣಿನ ಸ್ವಾತಂತ್ರ್ಯ ಮತ್ತು ಅದಕ್ಕೆ ಪುರುಷ ಮನಸ್ಸು ಸ್ಪಂದಿಸುವ ಬಗೆಯನ್ನು ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಒಂದು ದಿನ ತನ್ನ ದೈನಿಕದಿಂದ ಬಿಡುವು ಪಡೆಯಲು ಬಯಸುವ ಗೃಹಿಣಿಯೊಬ್ಬಳ ಹಂಬಲ ಆಕೆಯ ಕುಟುಂಬದ ಕಣ್ಣಿಗೆ, ಸಮಾಜದ ಕಣ್ಣಿಗೆ ಹೇಗೆ ಕಾಣುತ್ತದೆ ಎನ್ನುವುದರ ಚಿತ್ರಣ ಸಹೃದಯರನ್ನು ಬೆಚ್ಚಿಬೀಳಿಸುವಂತಿದೆ. 2016ರ ಸಾಲಿನ ‘ಅತ್ಯುತ್ತಮ ಕಿರುಚಿತ್ರ’ ಪ್ರಶಸ್ತಿ ಪಡೆದಿರುವುದು ‘ಅನಲ’ದ ಮತ್ತೊಂದು ವಿಶೇಷ.

‘ಜಯನಗರ ಫೋರ್ಥ್ ಬ್ಲಾಕ್’, ‘ನೂರು ರೂಪಾಯಿ’, ‘ಗೋಣಿಚೀಲ’, ‘ಒಂದು ರೂಪಾಯಿ’, ‘ಪರಿವರ್ತನೆ’, ‘ಘಟಿಂಗ’, ‘ಫಾರಿನ್ ರಿಟರ್ನ್ಡ್’ — ಇವುಗಳೆಲ್ಲ ಬೇರೆ ಬೇರೆ ಕಾರಣದಿಂದ ನೋಡುಗರ ಗಮನ ಸೆಳೆದಿರುವ ಕೆಲವು ಕಿರುಚಿತ್ರಗಳು.

## ಉದ್ದೇಶಕ್ಕೆ ಆದ್ಯತೆ, ಲಾಭ ನಗಣ್ಯ

ಸ್ವತಂತ್ರ ಮಾಧ್ಯಮವಾಗಿ ಕಿರುಚಿತ್ರ ಪ್ರಕಾರ ಬೆಳೆದಿರುವುದೇನೋ ಸರಿ. ಆದರೆ, ಬಂಡವಾಳ ವಾಪಸ್ಸಾಗುವ ಪರಿಸ್ಥಿತಿ ಇದೆಯೇ ಎಂದರೆ ಯಾರಿಂದಲೂ ಉತ್ಸಾಹದ ಪ್ರತಿಕ್ರಿಯೆ ವ್ಯಕ್ತವಾಗುವುದಿಲ್ಲ. “ಕನ್ನಡದಲ್ಲಿ ಕಿರುಚಿತ್ರಗಳಿಂದ ಲಾಭ ನಿರೀಕ್ಷಿಸುವುದು ಕಷ್ಟ. ಆದರೆ, ‘ಪ್ರೆಸೆಂಟ್ ಸರ್’ ಕಿರುಚಿತ್ರ ನನಗೆ ತಂದುಕೊಟ್ಟ ಹೆಸರು ಹಾಗೂ ತೃಪ್ತಿ ದುಡ್ಡಿನ ಮೂಲಕ ಸಿಗುವಂಥದ್ದಲ್ಲ’’ ಎನ್ನುತ್ತಾರೆ ಆಕರ್ಷ.

“ನಮಗೆ ಕಿರುಚಿತ್ರಗಳ ಪ್ರದರ್ಶನಕ್ಕೆ ವೇದಿಕೆಗಳೇ ಇಲ್ಲ. ಸಿನಿಮಾಗಳಿಗೆ ಇರುವ ಟೀವಿ ರೈಟ್ಸ್, ಮಾರಾಟದ ಅನುಕೂಲ ಈ ಮಾಧ್ಯಮಕ್ಕಿಲ್ಲ. ನಾವು ಪ್ರದರ್ಶನದ ಹೊಸ ಸಾಧ್ಯತೆಗಳನ್ನು ಇನ್ನೂ ಕಂಡುಕೊಳ್ಳಬೇಕಿದೆ’’ ಎನ್ನುತ್ತಾರೆ ಸಂಜ್ಯೋತಿ.

ಷಾರ್ಟ್ ಫಿಲ್ಮ್‌ಗಳ ಆರ್ಥಿಕ ಲೆಕ್ಕಾಚಾರದ ಬಗ್ಗೆ ಮಾತನಾಡುವಾಗ, ಅವುಗಳ ಮೂಲ ಉದ್ದೇಶದಲ್ಲೇ ಲಾಭಕ್ಕೆ ಹೆಚ್ಚಿನ ಆದ್ಯತೆಯಿಲ್ಲ ಎನ್ನುವುದನ್ನು ಗಮನಿಸಬೇಕು. ಸಿನಿಮಾ ಎಲ್ಲರ ಕೈಗೆಟುಕದ ದುಬಾರಿ ಮಾಧ್ಯಮ. ಈಚಿನ ದಿನಗಳಲ್ಲಂತೂ ಅದು ಬಂಡವಾಳಶಾಹಿ ರೂಪದಲ್ಲಿ ಬೆಳೆಯುತ್ತಿದೆ. ಈ ಬಂಡವಾಳಶಾಹಿತನಕ್ಕೆ ಕಿರುಚಿತ್ರ ಉತ್ತರವೂ ಹೌದು, ಬಂಡಾಯವೂ ಹೌದು. ಕಡಿಮೆ ಬಂಡವಾಳದಲ್ಲಿ ಅಥವಾ ಶೂನ್ಯ ಬಂಡವಾಳದಲ್ಲಿ ಕಿರುಚಿತ್ರ ನಿರ್ಮಿಸುವುದು ಸಾಧ್ಯ. ಸಮಾನಾಸಕ್ತರು ಯಾವುದೇ ಬಂಡವಾಳ ತೊಡಗಿಸದೆ, ತಮ್ಮ ಪ್ರತಿಭೆ– ಶ್ರಮವನ್ನಷ್ಟೇ ತೊಡಗಿಸಿ ಕಿರುಚಿತ್ರಗಳನ್ನು ರೂಪಿಸಿರುವ ಉದಾಹರಣೆಗಳು ಕನ್ನಡದಲ್ಲಿ ಸಾಕಷ್ಟಿವೆ.

ಕಿರುಚಿತ್ರ ಮಾಧ್ಯಮವನ್ನು ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಪರಿಗಣಿಸಿರುವವರೂ ಇದ್ದಾರೆ. ನವ್ಯ ಸಾಹಿತ್ಯದ ಪ್ರಭಾವ ದಟ್ಟವಾಗಿದ್ದ ದಿನಗಳಲ್ಲಿ ಕನ್ನಡದ ಕೆಲವು ಬರಹಗಾರರು ಸಿನಿಮಾ ಮಾಧ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ತಲೆಮಾರಿನ ಬರಹಗಾರರು ಕೂಡ ದೃಶ್ಯಮಾಧ್ಯಮದ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಅವರಲ್ಲಿ ಕೆಲವರು ಕಿರುಚಿತ್ರಗಳನ್ನು ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಬಳಸಿಕೊಳ್ಳುವ ಗಂಭೀರ ಪ್ರಯತ್ನಗಳನ್ನು ಮಾಡಿದ್ದಾರೆ. ಇದಕ್ಕೆ ಅತ್ಯುತ್ತಮ ಉದಾಹರಣೆ ‘ಅನಲ’ ಕಿರುಚಿತ್ರವನ್ನು ಹೆಸರಿಸಬಹುದು. ಈ ಚಿತ್ರದ ನಿರ್ದೇಶಕಿ ವಿ.ಕೆ. ಸಂಜ್ಯೋತಿ ಮೂಲತಃ ಬರಹಗಾರ್ತಿ. ಅವರು ರೂಪಿಸಿದ ‘ಅನಲ’ ನಾಡಿನ ವಿವಿಧ ಭಾಗಗಳಲ್ಲಿ ಪ್ರದರ್ಶನಗೊಂಡಿರುವುದಲ್ಲದೆ, ಪ್ರಜ್ಞಾವಂತರ ಪ್ರತಿಕ್ರಿಯೆಗಳಿಗೂ ಕಾರಣವಾಗಿದೆ. ಒಂದು ಗಂಭೀರ ಸಿನಿಮಾ ಹುಟ್ಟುಹಾಕುವಷ್ಟು ಚರ್ಚೆಗಳನ್ನು ‘ಅನಲ’ ರೂಪಿಸಿದ್ದು, ಕಿರುಚಿತ್ರಗಳ ಸಾಧ್ಯತೆ ಹಾಗೂ ಭವಿಷ್ಯದ ಬಗ್ಗೆ ನಿರೀಕ್ಷೆಗಳನ್ನು ಹುಟ್ಟಿಸುವಂತಿದೆ. ಕವಿ ವೀರಣ್ಣ ಮಡಿವಾಳರ ಕಿರುಚಿತ್ರವೊಂದನ್ನು ರೂಪಿಸುವ ಹುಮ್ಮಸ್ಸಿನಲ್ಲಿದ್ದಾರೆ. ಅನ್ನ ಹುಡುಕುತ್ತ ಊರೂರು ಅಲೆಯುವ ಕಾರ್ಮಿಕರ ಕುಟುಂಬದ ತಲ್ಲಣಗಳ ಜೊತೆಗೆ, ಆ ಕುಟುಂಬದ ಹುಡುಗನೊಬ್ಬನ ಅಕ್ಷರ ಹಂಬಲವನ್ನು ಕಿರುಚಿತ್ರದಲ್ಲಿ ರೂಪಿಸುವ ಪ್ರಯತ್ನ ಅವರದು.

“ದೃಶ್ಯ ಮಾಧ್ಯಮ ನನ್ನ ಅಭಿವ್ಯಕ್ತಿಯ ಪರಿಣಾಮಕಾರಿ ಮಾಧ್ಯಮ ಎಂದು ಭಾವಿಸಿರುವೆ. ಸಿನಿಮಾ ದೊಡ್ಡ ಮಾಧ್ಯಮ. ಹೆಚ್ಚು ಜನರನ್ನು ತಲುಪುವಂಥದ್ದು. ಓದು– ಬರಹ ಗೊತ್ತಿಲ್ಲದವರಿಗೂ ತಲುಪುವ ಶಕ್ತಿ ಅದಕ್ಕಿದೆ. ಈ ಆಕರ್ಷಣೆಯಿಂದಲೇ ಕಿರುಚಿತ್ರ ಮಾಧ್ಯಮದತ್ತ




ಪ್ರಶಸ್ತಿ ವಿಜೇತ ಕಿರುಚಿತ್ರ ‘ಚೌಕ ಬಾರ’